

# ಅನಂತದಿಂ ದಿಗಂತದಿಂ

**ಕಳೆದ ಕೆಲವು ವರ್ಷಗಳಿಂದ ಅನಂತನಾಗ್ ಅವರಿಗೆ ಪದ್ಮಭೂಷಣ ಬರಬೇಕಿತ್ತು ಎಂದು ಹಂಬಲಿಸುತ್ತಿದ್ದವರ ಸಂಖ್ಯೆ ದೊಡ್ಡದಿತ್ತು. ಆ ಹಂಬಲ ಈಗ ಸಾಕಾರಗೊಂಡಿದೆ.**

**■ ವಿಶಾಖ ಎನ್.**

ಮಠ ಸಂಸ್ಕೃತಿಯ ಪರಿಚಾರಿಕೆಯ ಕುಟುಂಬದ ಕುಡಿ ಅನಂತನಾಗ್. ಭಟ್ಕಳದ ನಾಗರಕಟ್ಟೆ ತವರು. ಮರಾಠಿ, ಕೊಂಕಣಿ ನೆಲದ ನಂಟು ಬೆಳೆದದ್ದು ಆಗಿನ ಬಾಂಬೆಯಲ್ಲಿ. ರಂಗಭೂಮಿ ಅಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ, ಅನಂತನಾಗ್ ಅದರ ಆಯಸ್ಕಾಂತೀಯ ಸೆಳೆತಕ್ಕೆ ಒಳಗಾದರು. ಅಮೋಲ್ ಪಾಲೇಕರ್ ಪರಿಚಯ ಆದದ್ದು ಅಲ್ಲೇ. ಪಾಲೇಕರ್ ಮೂಲಕ ಸತ್ಯದೇವ್ ದುಬೆ ಅವರಂಥ ದಿಗ್ಗಜ ರಂಗಕರ್ಮಿಯ ಒಡನಾಟ ಸಾಧ್ಯವಾಯಿತು. ನಾಟಕಗಳಲ್ಲಿ ಅಭಿನಯದ ವರಸೆಗಳಲ್ಲಿ ಪಳಗಿದ ಅನಂತನಾಗ್ ಅವರಿಗೆ ಕನ್ನಡದ 'ಸಂಕಲ್ಪ' ಸಿನಿಮಾದಲ್ಲಿ ಮೊದಲು ಅವಕಾಶ ಸಿಕ್ಕಿತು. ನಂಜರಾಜೇ ಅರಸ್ ನಿರ್ದೇಶನದ ಆ ಚಿತ್ರದ ಚಿತ್ರೀಕರಣ ಮುಗಿದಿತ್ತಷ್ಟೆ, ಶ್ಯಾಮ್ ಬೆನಗಲ್ ಪರಿಚಯ ಆಯಿತು. ಸತ್ಯದೇವ್ ದುಬೆ ಅವರಿಂದ ಸಾಧ್ಯವಾದ ಭೇಟಿ ಕೊನೆಗೆ ಸಿನಿಮಾದ ಬೀಜಾಂಕುರಕ್ಕೆ ಕಾರಣವಾದುದು ಅಚ್ಚರಿ.

ಶ್ಯಾಮ್ ಬೆನಗಲ್ ಒಂದು ಸಿನಿಮಾ ಸ್ಕ್ರಿಪ್ಟ್ ಮಾಡಿದ್ದರು. ಅದಕ್ಕೆ 'ಸೀಡ್ಲಿಂಗ್' ಎಂಬ ಇಂಗ್ಲಿಷ್ ಶೀರ್ಷಿಕೆ ಇಟ್ಟಿದ್ದರು. ಹಿಂದಿಯಲ್ಲಿ ಹೆಸರು ಬದಲಿಸಬೇಕೆಂಬ ಬಯಕೆ. ಆದರೆ, ಸರಿಯಾದ ಪದ ಹೊಳೆಯಲಿಲ್ಲ. ಅನಂತನಾಗ್ ಸಂಸ್ಕೃತ ಸಾಂಗತ್ಯವು ಥಟ್ಟನೆ ಸೂಕ್ತವಾದ ಪದವನ್ನು ತಲೆಯಲ್ಲಿ ಮೂಡಿಸಿತ್ತು. ಅದನ್ನು ಏಕಾಏಕಿ ಬೆನಗಲ್ ಅವರಲ್ಲಿ ಹೇಳುವ ಧೈರ್ಯ ಇರಲಿಲ್ಲ. ಶೀರ್ಷಿಕೆ ಸೂಚಿಸಿದವರಿಗೆ ಒಂದು ಸಾವಿರ ರೂಪಾಯಿ ಬಹುಮಾನವನ್ನು ಆಗ ಬೆನಗಲ್ ಘೋಷಿಸಿದರು. ತಕ್ಷಣವೇ ಅನಂತನಾಗ್ 'ಅಂಕುರ್' ಎಂಬ ಹೆಸರು ಸೂಚಿಸಿದರು. ಸಿನಿಮಾ ಶೀರ್ಷಿಕೆಯೂ ಅದೇ ಆಯಿತು. ಸಾವಿರ ರೂಪಾಯಿ ಬಹುಮಾನವೂ ಸಂದಿತು. ಆ ಚಿತ್ರದ ನಾಯಕ ಪಾತ್ರವೂ ಒಲಿದುಬಂದಿತು.

'ಅಂಕುರ್' ನಂತರ 'ಮಂಥನ್' ಸಿನಿಮಾವರೆಗೆ ಅನಂತನಾಗ್ ಅವರಿಗೆ ಬೆನಗಲ್ ಸಾಣೆ ಸಿಕ್ಕಿತು. ಹಿಂದಿ ಹಾಗೂ ಮರಾಠಿ ಮನರಂಜನಾ ಮಾಧ್ಯಮದಲ್ಲಿ ಪಳಗಿದ ಅನಂತನಾಗ್ ಕನ್ನಡದಲ್ಲಿ ಪರ್ಯಾಯ ಸಿನಿಮಾ ಅಲೆಯ ಉಬ್ಬರವನ್ನೂ ಹತ್ತಿರದಿಂದ ಕಂಡರು. ಕಮರ್ಷಿಯಲ್ ಪ್ರಯೋಗಗಳಿಗೂ ಎದೆಗೊಟ್ಟರು. ಶಂಕರ್ ಜೊತೆ ಸೇರಿ ಅವರು 'ಮಾಲ್ಗುಡಿ ಡೇಸ್' ತರಹದ ಅನನ್ಯ ಧಾರಾವಾಹಿಯ ಸಾಹಸಕ್ಕೆ ಕೈ ಹಾಕಿದರು. ಹಣ ಕಳೆದುಕೊಂಡರೂ ಶಾಶ್ವತ ಸ್ಥಾನವೊಂದನ್ನು ಭಾರತ್ ಮನರಂಜನಾ ಕ್ಷೇತ್ರದಲ್ಲಿ ದಕ್ಕಿಸಿಕೊಟ್ಟ ಧಾರಾವಾಹಿ ಅದು.

'ಮಿಂಚಿನ ಓಟ' ಸಿನಿಮಾ ನಿರ್ಮಾಣ ಮಾಡಿದ್ದು ಕೈಸುಟ್ಟುಕೊಂಡ ಮತ್ತೊಂದು ಸಾಹಸ. ಆ ಚಿತ್ರದ 'ಟೋನಿ' ಪಾತ್ರ ಅನಂತ್ ಒಳಗಿನ ಆ್ಯಂಗ್ರಿ ಯಂಗ್ ಮ್ಯಾನ್‌ಗೆ ಕನ್ನಡಿ ಹಿಡಿಯುತ್ತದೆ. 'ನಾ ನಿನ್ನ ಬಿಡಲಾರೆ' ಸಿನಿಮಾದ ದೆವ್ವವಾಗಿಯೂ ಅವರು ಕಾಡಿದ ನೆನಪು ಇನ್ನೂ ಇದೆ. 'ನಾರದ ವಿಜಯ' ಚಿತ್ರದ ದ್ವಿಪಾತ್ರದ ಕಚಗುಳಿ, 'ಗಣೇಶನ ಮದುವೆ'ಯ ಅಸಾಧ್ಯ ಕಾಮಿಕ್ ಟೈಮಿಂಗು, 'ಬೆಂಕಿಯ ಬಲೆ'ಯ ಹಲವು ಭಾವಗಳ ತುಳುಕಿಸಿದ ಸಾಂದ್ರ ಪಾತ್ರ, 'ಉಂಡೂ ಹೋದ ಕೊಂಡೂ ಹೋದ' ಸಿನಿಮಾದ ಪರಮ ವಂಚಕ... ಇವೆಲ್ಲವೂ ಅನಂತ್ ವರ್ಸಟಾಲಿಟಿಗೆ ಕೆಲವು ಝಲಕ್‌ಗಳು.

'ಮುಂಗಾರು ಮಳೆ'ಯಲ್ಲಿ ಕಿವಿಗೆ ಮಷಿನ್ ಹಾಕಿಕೊಂಡ ಅವರ ಪಾತ್ರ ವೃತ್ತಿ ಬದುಕಿನ ಇನ್ನೊಂದು ಇನಿಂಗ್ಸ್‌ಗೆ ಕದ ತೆರೆಯಿತು. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಅವರ ಪಾತ್ರವಂತೂ ತಮ್ಮ ವಯಸ್ಸಿಗೆ ತಕ್ಕುದಾದ ಹಲವು ಸಿಕ್ಕುಗಳನ್ನು ಕಾಣಿಸಿತು. 'ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಕಾಸರಗೋಡು' ಚಿತ್ರದಲ್ಲಿ ಕನ್ನಡದ ಪರವಾಗಿ ಕೋರ್ಟಿನಲ್ಲಿ ಅವರು ಮಾಡುವ ಭಾಷಣಕ್ಕೆ ಚಪ್ಪಾಳೆ ಸಂದಿತು. 'ಕೆಜಿಎಫ್' ಸಿನಿಮಾಗೂ ಅವರ ತೂಕದ ಕಂಠದ ನಿರೂಪಕ ಬೇಕಾಯಿತು.

'ಬಯಲು ದಾರಿ'ಯಲ್ಲಿ ಚಾಪರ್‌ನಲ್ಲಿ ಕೂತ ಸುಂದರಾಂಗ, ಲಕ್ಷ್ಮೀ ಜೊತೆಗಿನ ದಾಂಪತ್ಯಗೀತೆಯಲ್ಲಿನ ತನ್ಮಯತೆ, ಕುಣಿಯಲು ಬಾರದೆ ಇದ್ದರೂ ನೆಲ ಡೊಂಕು ಎನ್ನದ ನೇರವಂತಿಕೆ... ಎಲ್ಲವೂ ಅನಂತ್ ಅವರನ್ನು ಅನಂತದಿಂದ ದಿಗಂತಕ್ಕೆ ಕೊಂಡೊಯ್ದಿತು.

ಈಗಲೂ ಅನಂತ್ ಮನೆಯಲ್ಲಿ ಹಲವು ಸ್ಕ್ರಿಪ್ಟ್‌ಗಳು ಇವೆ. ಅವರ ಕಾಲ್‌ಶೀಟ್ ಬೇಡಿಕೆ ಕುಂದಿಲ್ಲ ಎನ್ನುವುದಕ್ಕೆ ಇದು ಸಾಕ್ಷಿ. ಹಾಗೆಂದು ಬರುವ ಪಾತ್ರಗಳನ್ನೆಲ್ಲ ಅವರೀಗ ಒಪ್ಪಲಾರರು.

ಪ್ರತಿಕ್ರಿಯಿಸಿ: feedback@sudha.co.in